

ಎಡದಿಂದ ಬಲಕ್ಕೆ:

1. ಕಮ್ಮಿಯಾದದ್ದನ್ನೂ ಅರಿಯದ ಮುಗ್ಧ ಅವನು (4)
3. ಅಭ್ಯಾಸ ಕುರಿತಂತೆ ಅಲ್ಲಿ ಭಾರೀ ಕೊರತೆ (3)
4. ಖರ್ಜೂರ ತಂದದ್ದಕ್ಕೆ ಉಡುಗೊರೆಯಾಗಿ ರಾಜಲೋಹ (3)
6. ವರುಣನ ಕೋಪದ ಹೋಗಲಾಡಿಸುವಿಕೆ ಹೇಗೆ? (4)
7. ಅವನ ಸ್ಥಿತಿಯಲ್ಲಿ ತೀವ್ರ ಇಳಿತ (4)
9. ಹಂಗಿನ ಮಾತಿನಿಂದಲೇ ಆರಂಭವಾದದ್ದು ಈ ದ್ವೇಷ, ಶತ್ರುತ್ವ (4)
11. ಪಾರು ಮಾಡಲು ಪಟ್ಟ ಶ್ರಮದಲ್ಲಿ ಎಲ್ಲರಿಗೂ ಹೆಚ್ಚು ಕಡಿಮೆ ಇಲ್ಲದ ಭಾಗ (4)
13. ಗಜಾನನನಂತೆಯೇ ಆದರೆ ಹೇಗೆ ಷಣ್ಮುಖ? (4)
15. ಮಾವನ ವರ್ತನೆಯ ಈಗಿನ ಸುದ್ದಿ ಏನು? (4)
17. ಮಗನಿಂದಲೇ ಈ ಕೃತ್ಯ ಎಂಬ ಸಂಶಯ (3)
18. ವಿರೋಧವನ್ನೆಲ್ಲ ನಿಗ್ರಹಿಸಬಲ್ಲ ವಿದ್ವಾಂಸ ಈತ (3)
19. ತಪ್ಪಾಗಿರುವುದು ಹೌದು. ಈಗ ಸುಮ್ಮನಿರು (4)

ಮೇಲಿಂದ ಕೆಳಕ್ಕೆ:

1. ಅನ್ನವನ್ನು ನೀಡುವುದು ಇದೇ ಭೂಮಿ (3)
2. ಕರ್ಣಾಭರಣ ತಯಾರಿಸುವ ಸಾಧನ (3)
3. ಅಧ್ಯಯನಕ್ಕೆಂದು ಬಂದವ ಆಶ್ರಿತನಾದ (3)
5. ತಗಾದೆ ಆರಂಭವಾದದ್ದು ಪಕ್ಷದ ಮೂರನೇ ದಿನ (3)
7. ಆಸರೆಯೇ ಇಲ್ಲದವ ಆಳುವವನಾದಾನೇ? (3)
8. ಕಲ್ಲು ತಿರುಗಿಸಿ ತಿರುಗಿಸಿ ಅದೇ ಹುಚ್ಚು ಹತ್ತಿದೆ (3)
9. ಶಹರವನ್ನು ಕಂಡೊಡನೆ ಭಾರೀ ಸಂತಸ (3)
10. ನೇಮಕಾತಿಯನ್ನು ನೀಡಿದ್ದಕ್ಕೆ ವಂದನೆ (3)
12. ಗಾಂಪರ ಗುಂಪಿನಿಂದ ದಾಟಿ ಹೋಗು (3)
14. ಮೂಢರ ದುರಾಡಳಿತದಿಂದ ಕ್ಷಾಮ ಖಂಡಿತ (3)
15. ಎಂಥ ಶ್ರೇಷ್ಠ ವರ್ತನೆಯ ಮಹಿಳೆ ಈಕೆ (3)
16. ನೋವಿರುವವರೆಗೂ ಪರಿಸ್ಥಿತಿ ತುಂಬ ಸೂಕ್ಷ್ಮ (3)

### ಪದಬಂಧ 22-11-2012 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಉಪದೇಶ; 3. ಬಲ್ಲಿದ; 4. ತರ್ಜುಮೆ; 6. ಯಕ್ಷಲೋಕ; 7. ಅಂಕುರ; 9. ಅಂಗುಲ; 11. ಜಟಿಲ; 13. ರಕ್ಷಿತ; 15. ಹಸ್ತಾಂತರ; 17. ಲುಕ್ಸಾನು; 18. ಭರಣಿ; 19. ಮಧುಮಾಸ.

ಮೇಲಿಂದ ಕೆಳಕ್ಕೆ:

1. ಉದಯ; 2. ಶತಕ; 3. ಬದುಕು; 5. ಮೆರುಗು; 7. ಅಂಬುಜ; 8. ರಸಾಲ; 9. ಅಂಜೂರ; 10. ಲಲಿತ; 12. ಟಿಸಿಲು; 14. ಕ್ಷಿಪಣಿ; 15. ಹನುಮ; 16. ರಭಸ.

# ಪ್ರಶ್ನಾಂಕಣ

## ಜೇಡನ ಕಣ್ಣು - ಏನು ವಿಶೇಷ?

ಜೇಡ ಅದೊಂದು 'ಸಂಧಿ ಪದಿ' (ಎರಾಕ್ನಿಡ್). ಚೇಳುಗಳಿಗೆ ಅದು ಅತಿ ನಿಕಟ ಸಂಬಂಧಿ. ಸಮೀಪ ಇಪ್ಪತ್ತು ಕೋಟಿ ವರ್ಷಗಳಿಂದ ಜೇಡಗಳು ಧರೆಯಲ್ಲಿ ನೆಲೆಸಿವೆ. ಜೇಡಗಳಲ್ಲಿ ವಿಪರೀತ ವೈವಿಧ್ಯ ಇದೆ. ಪ್ರಸ್ತುತ ಒಂದು ನೂರ ಒಂಬತ್ತು ಕುಟುಂಬಗಳಾಗಿ ವರ್ಗೀಕರಣಗೊಂಡಿರುವ ಜೇಡಗಳಲ್ಲಿ ಒಟ್ಟು ನಲವತ್ತು ಸಾವಿರ ಪ್ರಭೇದಗಳಿವೆ. ಕಣ್ಣಿಗೇ ಕಾಣದಷ್ಟು ಅಲ್ಪಗಾತ್ರದಿಂದ ಒಂದಡಿ ವ್ಯಾಸದವರೆಗೆ ಅವುಗಳದು ಭಿನ್ನ ಭಿನ್ನ ಗಾತ್ರ-ವಿಸ್ತಾರ.

ಜೇಡಗಳಿಗೆ ಕಣ್ಣಿದೆ: ಒಂದಲ್ಲ, ಎರಡಲ್ಲ, ನಾಲ್ಕು ಜೊತೆ. ಎಂದರೆ ಒಟ್ಟು ಎಂಟು ಕಣ್ಣುಗಳು! ಶಿರದ ಮುಂಭಾಗದಲ್ಲಿ ಎರಡು, ಅವುಗಳ ಪಕ್ಕದಲ್ಲೇ ಮತ್ತೆರಡು (ಚಿತ್ರ ನೋಡಿ). ತಲೆಯ ಎಡ-ಬಲಗಳಲ್ಲಿ ಒಂದೊಂದು, ನೆತ್ತಿಯ ಮೇಲೆ ಎರಡು- ಹೀಗೆ ಎಂಟು ಅಕ್ಷಿಗಳ ಸಾಮಾನ್ಯ ವಿನ್ಯಾಸ. ಈ ವಿನ್ಯಾಸ ಕುಟುಂಬದಿಂದ ಕುಟುಂಬಕ್ಕೆ ಸ್ವಲ್ಪ ಸ್ವಲ್ಪ ವಿಭಿನ್ನ.



ವಿನ್ಯಾಸ ಹೇಗೇ ಇರಲಿ, ಎಲ್ಲ ಪ್ರಭೇದಗಳ ಚಕ್ಷುಗಳ ಕಾರ್ಯವಿಧಾನವೂ ಒಂದೇ. ಮುಂಬದಿಯ ಒಂದು ಜೊತೆ ಪ್ರಧಾನ ಕಣ್ಣುಗಳು ದೊಡ್ಡವು; ಅವು ಮಾತ್ರ ಸ್ಪಷ್ಟ ದೃಶ್ಯಗಳನ್ನು ಕಾಣುತ್ತವೆ. ಸ್ಫುಟ ನೋಟಗಳನ್ನು ಒದಗಿಸುತ್ತವೆ. ಉಳಿದೆಲ್ಲ ಕಣ್ಣುಗಳದ್ದೂ ಸ್ಥೂಲ ಸಂಯುಕ್ತಾಕ್ಷಿ ಸ್ವರೂಪ. ಅವು ಬೆಳಕು-ನೆರಳುಗಳನ್ನು ಮಾತ್ರ ಗ್ರಹಿಸುತ್ತವೆ, ಗುರುತಿಸುತ್ತವೆ. ಅದೇನೇ ಇದ್ದರೂ ಒಟ್ಟಾರೆ ಇಷ್ಟು ಚಕ್ಷುಗಳಿಂದಾಗಿ ಜೇಡ ತನ್ನ ಸುತ್ತಲಿನ ಎಲ್ಲ ಚಲನ ವಲನಗಳನ್ನೂ ಇದ್ದಲ್ಲಿಂದಲೇ ಏಕಕಾಲದಲ್ಲೇ ಕಾಣಬಲ್ಲದು.

ಜೇಡದ ಶಿರದ ಮುಂಭಾಗದ ಒಂದು ಜೊತೆ ಪ್ರಧಾನ ಕಣ್ಣುಗಳಲ್ಲಿ ಪ್ರತಿಯೊಂದರಲ್ಲೂ ಹಲವಾರು ಮಸೂರಗಳಿವೆ. ಅವನ್ನು ಅಗತ್ಯಾನುಸಾರ ಮುಂದಕ್ಕೂ ಹಿಂದಕ್ಕೂ ಸರಿಸಿ, ಹೊಂದಿಸಿ ಜೇಡ ತನ್ನ ಕಣ್ಮುಂದಿನ ದೃಶ್ಯವನ್ನು ಸ್ಪಷ್ಟಗೊಳಿಸಿಕೊಳ್ಳುತ್ತದೆ. ಹಾಗೆ ಒದಗುವ ದೃಶ್ಯಗಳನ್ನೆಲ್ಲ ಗ್ರಹಿಸಿ ಮಿದುಳಿಗೆ ರವಾನಿಸಿ ಇಡೀ ಚಿತ್ರವನ್ನು ಜೇಡನಿಗೆ ಕಾಣುವಂತೆ ಮಾಡಲು ಪ್ರತಿ ಕಣ್ಣಿನಲ್ಲೂ ನಾಲ್ಕು ಪದರಗಳ 'ಅಕ್ಷಿಪಟ' (ರೆಟಿನಾ) ಇದೆ.

ಕೆಲವು ಜೇಡ ಪ್ರಭೇದಗಳ ದೃಷ್ಟಿ ಅದೆಷ್ಟು ಸೂಕ್ಷ್ಮವೆಂದರೆ ಅವುಗಳ ದೃಷ್ಟಿ ತೀಕ್ಷ್ಣತೆ ಕೀಟಗಳ ದೃಷ್ಟಿಯ ಹತ್ತುಪಟ್ಟು ಉತ್ಕೃಷ್ಟ. ಮನುಷ್ಯರದು ಜೇಡ ದೃಷ್ಟಿಯ ಐದು ಮಡಿಯಷ್ಟೇ ಅಧಿಕ!

■ ಎನ್. ವಾಸುದೇವ್